ತಿನ್ನುವೆ ತಾಲ್ಲೂಕು. ಹೋಬಳಿ.	ಗ್ರಾಮ.	ಹೊಡೆಡುವರ ಹೆಸರು.	ಅಂದಾಜಾ ಬೀ ಜವರೀ.	ಅಂದಾಜಿ ಹುಟ್ಟುವಳಿ ಯೂ ವರಿಜು.	ಸೊಲೀರುವಾ ಸರಕಾರಕ್ಕೆ ಕೊಡಬೇಕಾದ ಕ್ಯಾಪೀಟೇಷನ್.	ಯೂವಬಾಕೀಗೋಸ್ಕರ ಗ್ರಾಮ ಪರಾಜ್ ಮೂಡಲ್ಪಡುತ್ತೊ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗ್ಯೆರೆ.
ಕಡೂರು ಬೇಲೂರು.	ಹೊನ್ನಾವರ.	ಮೇಲನ ಹಳ್ಳಿ.	ಸುಬ್ಬಾವಧಾನಿ, ಇತರ 32 ಮಂದಿ.	ಎ. ಗುಂ. ಗ 213 13 0	ರೂ. ಆ. ಪೈ. 361 0 0	ರೂ. ಆ. ಪೈ. 86 0 0	ರೂ. ಆ. ಪೈ. 219 10 4	ಸನ್ 1885ನೇ ಇಸವಿ ಜುಲೈ ತಾರೀಖು 21ರಲ್ಲು ಬೇಲೂರು ತಾಲ್ಲೂಕು ಕಛ್ಚೇರಿಯಲ್ಲಿ ಅಮಲ್‌ದಾರ್ ರೂಬರೂ.

ಹುಕ್ಕುಂ ಬವೋಜೆಬ್,
ಆರ್. ವಿಜಯಿಾಂದ್ರರಾವ್,
ಸೆಕ್ರಟೇರಿ.

ಮಿಲಿಟೆರಿ ಇಲಾಖಾ.

ತಾರೀಖು 9ನೇ ಜುಲೈ 1885.

ಮೈಸೂರು ಕಾಲಾಳುಗಳ ಫೂಜೆನಲ್ಲಿ ಇದರಡೀಕಂಡ ಬಡ್ತಿಗಳು, 1885ನೇ ಇಸವಿ ಮೇ ತಿಂಗಳು 1ನೇ ಮುಕ್ತಂ ಲುಗಾಯಿತು ಮಂಜೂರ್ ಮಾಡಲ್ಪಟ್ಟಿವೆ:—

ವಂದನೇ ಪಟಾಲಂ ಹವಾಲ್‌ದಾರ್ ಮೇಜರ್ ಸುಬ್ಬರಾಮಿಗೆ ಅದೇ ಪಟಾಲಂ 1ನೇ ಕ್ಲಾಸ್ ಜಮಾದಾರಿ ಕೆಲಸಕ್ಕೆ.

ಯರಡನೇ ಪಟಾಲಂ ಹವಾಲ್‌ದಾರ್ ಮೇಜರ್ ಸೈಯದ್ ಗೌಸಗೆ, ಅದೇ ಪಟಾಲಂ ವಂದನೇ ಕ್ಲಾಸ್ ಜಮಾದಾರಿ ಕೆಲಸಕ್ಕೆ.

ಎ. ಸಿ. ಹೆ, ಕರ್ನಲ್,
ಮಿಲಿಟೇರಿ ಸೆಕ್ರಟೇರಿ.

ಪೊಲೀಸ್ ಇಲಾಖಾ.

ಇಸ್ತಿಹಾರ್‌ನಾಮೆ.

ನಂ. 185—23. ತಾರೀಖು 1ನೇ ಜುಲೈ 1885.

ಹೆಗ್ಗಡ ದೇವನಕೋಟೆ ತಾಲ್ಲೂಕು ಹೊಸಹಳ್ಳಿ ವಾಸಸ್ಥನಾದ ಕೆಂಪಯ್ಯನೆಂಬುವನು ಅದೇ ತಾಲ್ಲೂಕು ಕೊಳಗಳ ಗ್ರಾಮದ ಖಾನುಛೋಗ ಕೇಷಯ್ಯ ಯಂಬುವನನ್ನು ಬರ್ಖಾವಾಡಿ ಫರಾರಿಯಾಗಿರುವದರಿಂದ ಸದರೀ ಕೆಂಪಯ್ಯನ ದಸ್ತಗಿರೀ ಬಗ್ಯೆ, ಅಥವಾ ದಸ್ತಗಿರೀಗೆ ಸಾಧಕವಾದ ಬಾತಮಿಯನ್ನು ಕೊಡುವ ಬಗ್ಯೆ 50 ರೂಪಾಯಿಗಳ ಇನಾಮು ಕೊಡಲ್ಪಡುವದು.

ಸದರೀಯವನ ಚಹರೆಪಟ್ಟಿಯು ಇಬರಡಿ ಕಂಡಂತೆ ಇರುತ್ತೆ:—

ಹೆಸರು—ಕೆಂಪಯ್ಯ, ತಂದೆಹೆಸರು—ಲಿಂಗೇಗೌಡ, ಜಾತಿ—ಕಿವಾಜಾರ ವಕ್ಕಲಿಗ, ವಯಸ್ಸು—ಸುಮಾರು 25 ವರುಷ, ವಾಸಸ್ಥಳ—ಹೆಗ್ಗಡದೇವನಕೋಟೆ ತಾಲ್ಲೂಕು ಹೊಸಹಳ್ಳಿಯಲ್ಲಿ ಆಬೈರಿಗೆ ವಾಸವಾಗಿದ್ದದ್ದು.

ಹೆಗ್ಗುರ್ತುಗಳು—ಆಳು ಉದ್ದನಾ ಗಿಫಾನೆ; ಕಪ್ಪುವರ್ಣ; ಸಣ್ಣ ಮಿಾಸೆ; ದಾರದಲ್ಲಿ ಪೋಣಿಸಿದ ಒಂದು ಬೆಳ್ಳಿ ಕರಡಿಗೆ ಹಾಕಿಕೊಂಡಿ ಫಾನೆ. ತರಫಿನ ಯರಡು ಖಡಕುಗಳು, ಯಡಕಿವಿಯಲ್ಲಿ ಒಂದು ಪಟ್ಟುವುರು ಈ ಆಭರಣಗಳು ಮೈ ಮೇಲೆ ಇರುತ್ತೆ.

ಯಸ್. ವೆಂಕಟವರದಯ್ಯಂಗಾರ್,
ಅ|| ಸೆಕ್ರಟೇರಿ.